**ಕರ್ನಾಟಕ ಸರ್ಕಾರ**

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉ ನಿ : ಸುಮಪ : 2016-17** **ದಿನಾಂಕ: 27-9-2016**

**ಪತ್ರಿಕಾ ಪ್ರಕಟಣೆ**

# ಈ ವರ್ಷ ರಾಜ್ಯದಲ್ಲಿ ದ್ವಿದಳ ಧಾನ್ಯಗಳ ಬಂಪರ್ ಬೆಳೆ

ಬೆಂಗಳೂರು, ಸೆಪ್ಟೆಂಬರ್ 27, (ಕರ್ನಾಟಕ ವಾರ್ತೆ)

ದ್ವಿದಳ ದಾನ್ಯಗಳ ಬೆಲೆಗಳಲ್ಲಿ ಆಗುತ್ತಿರುವ ಏರಿಳಿತಗಳನ್ನು ಸಮಗ್ರವಾಗಿ ನಿರ್ವಹಿಸಲು ಮತ್ತು ಬೆಳೆದ ರೈತನಿಂದಲೆ ಮಾರುವ ವ್ಯವಸ್ಥೆಯನ್ನು ಮತ್ತು ಕೊಳ್ಳುವ ಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು ಸಮತೋಲನವನ್ನು ಕಾಯ್ದುಕೊಳ್ಳಲು ಕರ್ನಾಟಕ ಸರಕಾರ ಚಿಂತಿಸುತ್ತಿದ್ದು ಅದಕ್ಕಾಗಿ ಹೊಸ ರೂಪುರೇಷೆಗಳನ್ನು ನಿರೂಪಿಸಲು ಉತ್ಸುಕವಾಗಿದೆ ಎಂದು ಕೃಷಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇಂದು ಬೆಂಗಳೂರಿನ ದಿ ಕ್ಯಾಪಿಟಲ್ ಹೊಟೇಲ್‌ನಲ್ಲಿ ಹಮ್ಮಿಕೊಂಡಿದ್ದ ದ್ವಿದಳ ದಾನ್ಯಗಳ ನಿರ್ವಹಣೆ-ಉತ್ಪಾದನೆಯಿಂದ ಮಾರುಕಟ್ಟೆಯವರೆಗೆ ವಿಷಯದ ಕುರಿತಾದ ರಾಷ್ಟ್ರೀಯ ಮಟ್ಟದ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದರು. ಕಳೆದ ವರ್ಷ ದ್ವಿದಳ ದಾನ್ಯಗಳ ಬೆಲೆ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ರೈತರು ಈ ವರ್ಷ ಹೆಚ್ಚಿನ ದ್ವಿದಳ ದಾನ್ಯಗಳನ್ನು ಬಿತ್ತನೆ ಮಾಡಿದ್ದಾರೆ, ಈಗಾಗಲೇ ಹೆಸರು ಕಾಳು ಮಾರುಕಟ್ಟೆಯನ್ನು ಪ್ರವೇಶಿಸಿದ್ದು ಕಳೆದ ವರ್ಷಕ್ಕೆ ಹೋಲಿಸದಲ್ಲಿ ಬೆಲೆ ಕುಸಿತ ಕಂಡು ಬಂದಿದೆ, ಇಂತಹ ಪರಿಸ್ಥಿತಿಗಳಿಂದ ರೈತರನ್ನು ಕಾಪಾಡಲು ಸರಕಾರ ಬದ್ಧವಾಗಿದ್ದು ಇದಕ್ಕಾಗಿ ಬೆಳೆವ ರೈತ, ಮಾರುಕಟ್ಟೆ ಮತ್ತು ಕೊಳ್ಳುವ ಗ್ರಾಹಕರನ್ನು ಗಮನದಲ್ಲಿಟ್ಟುಕೊಂಡು ಹೊಸ ಸಮಗ್ರ ನೀತಿಯನ್ನು ರೂಪಿಸಲು ಸಹಾಯಕವಾಗುವಂತೆ ಈ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಕಳೆದ ವರ್ಷ ರಾಜ್ಯದಲ್ಲಿ ಒಟ್ಟು 17 ಮಿಲಿಯನ್ ಟನ್ ದ್ವಿದಳ ದಾನ್ಯ ಬೆಳೆಯಲಾಗಿತ್ತು ಅದು ಈ ವರ್ಷ 21 ಮಿಲಿಯನ್ ಟನ್ ತಲುಪುವ ಸಂಭವವಿದೆ, ಒಟ್ಟು ದ್ವೀದಳ ಧಾನ್ಯಗಳ ಉತ್ಪಾದನೆಯಲ್ಲಿ ರಾಜ್ಯ 5ನೇ ಸ್ಥಾನದಲ್ಲಿದೆ ಮತ್ತು ತೊಗರಿ ಉತ್ಪಾದನೆಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದು ಕಳೆದ ವರ್ಷ 10 ಲಕ್ಷ ಹೆಕ್ಟೇರ್ ನಷ್ಟಿದ್ದ ತೊಗರಿ ಬೆಳೆ ಈ ವರ್ಷ 16 ಲಕ್ಷ ಹೆಕ್ಟೇರ್ ಗಿಂತ ಹೆಚ್ಚು ಬಿತ್ತನೆಯಾಗಿದೆ. ಕಡಲೆ ಕಳೆದ ವರ್ಷ 10 ಲಕ್ಷ ಹೆಕ್ಟೇರ್ ನಲ್ಲಿ ಬೆಳೆಯಲಾಗಿತ್ತು ಅದು ಸಹ ಈ ವರ್ಷ ಹೆಚ್ಚಾಗಿದೆ, ಒಟ್ಟು 20 ಲಕ್ಷ ಹೆಕ್ಟೇರ್ ಕಳೆದ ವರ್ಷ ದಾಖಲೆಯಾಗಿದ್ದರೆ ಈ ವರ್ಷ 27 ಲಕ್ಷ ಹೆಕ್ಟೇರ್ ಬಿತ್ತನೆಯಾಗಿದ್ದು ಶೇಕಡ 40% ಹೆಚ್ಚಳವಾಗಿದೆ, ಕಡಲೆ ಬಿಟ್ಟು 7 ಲಕ್ಷ ಟನ್ ದ್ವಿದಳ ದಾನ್ಯಗಳನ್ನು ಕರ್ನಾಟಕದಲ್ಲಿ ಕಳೆದ ವರ್ಷ ಬೆಳೆಯಲಾಗಿತ್ತು ಅದು ಈ ವರ್ಷ 13 ಲಕ್ಷ ಟನ್ ಮೀರುವ ಸಾದ್ಯತೆಯಿದೆ ಎಂದು ಅಂದಾಜಿಸಲಾಗಿದ್ದು ಉತ್ಪಾದನೆಯಲ್ಲಿ ಶೇಕಡ 50% ಹೆಚ್ಚಳ ಕಂಡು ಬರುವ ಸಾದ್ಯತೆಯಿದೆ

ಅದಕ್ಕಾಗಿ ಮುಂಜಾಗ್ರತ ಕ್ರಮವಾಗಿ ಇದನ್ನು ವೈಜ್ಞಾನಿಕವಾಗಿ ಹೇಗೆ ನಿರ್ವಹಿಸಬಹುದು ಎಂಬುದನ್ನು ನಾವು ಈಗಲೆ ಕಂಡುಕೊಳ್ಳಬೇಕಾಗಿದೆ ಎಂದು ಹೇಳಿದರು.

2016ನೇ ವರ್ಷವನ್ನು ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ದ್ವಿದಳ ದಾನ್ಯಗಳ ವರ್ಷವೆಂದು ಘೋಷಣೆ ಮಾಡಿದೆ, ಇಳುವರಿ ಹೆಚ್ಚಿದಂತೆ ಬೆಲೆ ಕುಸಿತ ಕಾಣುವುದು ಸಹಜ ಅದಕ್ಕಾಗಿ ದೊಡ್ಡ ಮಾರಾಟಗಾರರು ಮತ್ತು ಕೊಳ್ಳುವವರು ರೈತರಿಂದಲೆ ನೇರವಾಗಿ ಖರೀದಿಸುವ ಹಾಗೂ ಅವರಿಗೆ ರಾಜ್ಯದ ಯಾವುದೇ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುವ ಏಕರೂಪ ಲೈಸನ್ಸ್ ನೀಡುವ ಬಗ್ಗೆ ಸರಕಾರ ಚಿಂತಿಸುತ್ತಿದೆ. ರೈತರು ಬೆಲೆ ಕುಸಿತ ಕಂಡು ಬಂದಾಗ ಸರಕಾರದ ಉಗ್ರಾಣದಲ್ಲಿ ಅವರ ಬೆಳೆಯನ್ನು ಸಂರಕ್ಷಿಸಿ ಇಟ್ಟುಕೊಳ್ಳುವ ಮತ್ತು ಉಗ್ರಾಣದಲ್ಲಿಟ್ಟಿರುವ ಅವರ ಬೆಳೆಗೆ ಬ್ಯಾಂಕುಗಳು ಸಾಲ ನೀಡುವ ವ್ಯವಸ್ಥೆ ಬಗ್ಗೆ ಚಿಂತಿಸಲಾಗುತ್ತಿದೆ. ಅಂತಾರಾಷ್ಟ್ರೀಯ ಕಂಪನಿಗಳು ಸೇರಿದಂತೆ ದೊಡ್ಡ ಕೊಳ್ಳುಗರಿಗೂ ಸಹ ಉಗ್ರಾಣ ವ್ಯವಸ್ಥೆಯ ಬಗ್ಗೆ ಚಿಂತಿಸಲಾಗುತ್ತಿದೆ ಎಂದರು.

ಬೆಳೆವ ರೈತ, ಮಾರುವ ಮಾರುಕಟ್ಟೆ, ಕೊಳ್ಳುವ ಗ್ರಾಹಕ ಸೇರಿದಂತೆ ಶೇಖರಣೆಯ ಉಗ್ರಾಣಗಳ ಬಗ್ಗೆ ನಾವು ಈಗಲೇ ಕ್ರಮ ತೆಗೆದುಕೊಂಡಲ್ಲಿ ಬೆಲೆ ಕುಸಿತವನ್ನು ತಪ್ಪಿಸಬಹುದು ಮತ್ತು ಗ್ರಾಹಕರ ಬೆಲೆ ಏರಿಕೆಯ ಬಾರ ಕಡಿಮೆ ಮಾಡಬಹುದು ಎಂದು ಹೇಳಿದರು.

ಕಾರ್ಯಗಾರದಲ್ಲಿ ಕರ್ನಾಟಕ ಸರಕಾರದ ಸಹಕಾರ ಇಲಾಖೆ, ಕರ್ನಾಟಕ ಉಗ್ರಾಣ ನಿಗಮದ ಅಧಿಕಾರಿಗಳು ಸೇರಿದಂತೆ ದೇಶದ ಇತರೆ ರಾಜ್ಯದ ಅಧಿಕಾರಿಗಳು, ರೈತರು ಮತ್ತು ಖಾಸಗಿ ಕಂಪನಿಗಳ ಅಧಿಕಾರಿಗಳು ಭಾಗವಹಿಸಿದ್ದರು.

ಛಾಯಾಚಿತ್ರ ಇದರೊಂದಿಗೆ ಲಗತ್ತಿಸಲಾಗಿದೆ)

## ಸಚಿವ ಸಂಪುಟ ಸಭೆ

ಬೆಂಗಳೂರು, ಸೆಪ್ಟೆಂಬರ್ 27, (ಕರ್ನಾಟಕ ವಾರ್ತೆ)

ಸಚಿವ ಸಂಪುಟದ 2016 ನೇ ಸಾಲಿನ 21 ನೇ ಸಭೆಯನ್ನು ಸೆಪ್ಟೆಂಬರ್ 28 ರಂದು ಮಧ್ಯಾಹ್ನ 3–00 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.

## ಪೋಸ್ಟ್ ಡಿಪ್ಲೋಮಾ ಇನ್ ಟೂಲ್ ಡಿಸೈನ್ ತರಬೇತಿ

ಬೆಂಗಳೂರು, ಸೆಪ್ಟೆಂಬರ್ 27, (ಕರ್ನಾಟಕ ವಾರ್ತೆ)

ಪ್ರೆಸ್ ಟೂಲ್ಸ್, ಪ್ಲಾಸ್ಟಿಕ್ ಮೌಲ್ಡ್ಸ್, ಪ್ರಷರ್ ಡೈ ಕ್ಯಾಸ್ಟಿಂಗ್ಸ್ ಡೈಸ್, ಜಿಗ್ಸ್ ಮತ್ತು ಫಿಕ್ಚರ್ ಮುಂತಾದ ವಿಷಯಗಳನ್ನೊಳಗೊಂಡ ಒಂದು ವರ್ಷದ ಅವಧಿಯ ಪೋಸ್ಟ್ ಡಿಪ್ಲೋಮಾ ಇನ್ ಟೂಲ್ ಡಿಸೈನ್ ಪ್ರವೇಶಕ್ಕೆ **ಮೆಕ್ಯಾನಿಕಲ್, ಇಂಡಸ್ಟ್ರಿಯಲ್ ಪ್ರೊಡಕ್ಷನ್, ಆಟೊ ಮೊಬೈಲ್, ಪ್ಲಾಸ್ಟಿಕ್ ಇಂಜಿನಿಯರಿಂಗ್ ಟೂಲ್ ಅಂಡ್ ಡೈ ಮೇಕಿಂಗ್, ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್, ಮೆಕಟ್ರಾನಿಕ್ಸ್** ವಿಷಯಗಳಲ್ಲಿ **ಡಿಪ್ಲೊಮಾ ಮತ್ತು ಬಿ.ಇ., ತರಗತಿಯಲ್ಲಿ** ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆರ್ಹ ಅಭ್ಯರ್ಥಿಗಳು ಖುದ್ದು ಅರ್ಜಿಯನ್ನು ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ 23152118/119 9141629585, 9449622046 ನ್ನು ಸಂಪರ್ಕಿಸಬಹುದಾಗಿದೆ.

# POST DIPLOMA COURSE IN TOOL DESIGN

**Bengaluru, September 27, (Karnataka Information)**

GTTC offers composite course in tool design covering press tools, plastic molds, pressure die casting dies, jigs & fixtures, etc. course is designed to impart training with exposer to latest trends in design & manufacture.

Eligibility: Diploma or BE in Mechanical, Industrial Production, Automobile, Plastics, Tool & Die Making, Precision Manufacturing, Mechatronics courses. CONTACT DETAILS: Bengaluru – 080 23152118/119, 9141629585, 9449622046.

## ಶ್ರೀಮತಿ ಚನ್ನಮ್ಮ ಹಳ್ಳಿಕೇರಿ ಅವರಿಗೆ ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ

ಬೆಂಗಳೂರು, ಸೆಪ್ಟೆಂಬರ್ 27, (ಕರ್ನಾಟಕ ವಾರ್ತೆ)

ಕರ್ನಾಟಕ 2016 ನೇ ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿ– ಪ್ರಶಸ್ತಿಯನ್ನು ಶ್ರೀಮತಿ ಚನ್ನಮ್ಮ ಹಳ್ಳಿಕೇರಿ ಅವರಿಗೆ ಘೋಷಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಕ್ಟೋಬರ್ 2 ರಂದು ಸಂಜೆ 6.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಮಾಡುವರು.

ಈ ಸಂದರ್ಭದಲ್ಲಿ ಕಲಾವಿದ ಎಂ.ಎಸ್. ಮೂರ್ತಿ ಚಿತ್ರಿಸಿರುವ "ಮಹಾತ್ಮಾ ಗಾಂಧಿ ರೇಖಾ ಚಿತ್ರ ದರ್ಶನ' ಹಾಗೂ ಪತ್ರಕರ್ತೆ ರೇಖಾರಾಣಿ ನಿರ್ದೇಶಿಸಿರುವ ಚನ್ನಮ್ಮ ಹಳ್ಳಿಕೇರಿ ಅವರ ಸಾಕ್ಷ್ಯಚಿತ್ರ ಬಿಡುಗಡೆಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ: ಹೊ. ಶ್ರೀನಿವಾಸಯ್ಯ ಅವರು ಮಾಡುವರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಕೇಂದ್ರ ರಸಗೊಬ್ಬರ ಖಾತೆ ಸಚಿವ ಅನಂತಕುಮಾರ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನೆ ಸಚಿವ ಕೆ. ಜೆ. ಜಾರ್ಜ್, ಕರ್ನಾಟಕ

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಹಾಗೂ ಅಧ್ಯಕ್ಷರು, ಮಹಾತ್ಮಾ ಗಾಂಧಿ ಸೇವಾ ಪ್ರಶಸ್ತಿಯ– ಕರ್ನಾಟಕ ಆಯ್ಕೆ ಸಮಿತಿಯ ನ್ಯಾಯಮೂರ್ತಿ ಎ. ಜೆ. ಸದಾಶಿವ ಅವರು ಭಾಗವಹಿಸುವರು.

## ಅಂತಿಮ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 27, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ದಿನಾಂಕ: 21–2–2015 ರಲ್ಲಿ ಅಧಿಸೂಚಿಸಿರುವ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಲ್ಲಿನ 31+03 (ಬ್ಯಾಲಾ) ಸಹಾಯಕ ನಿರ್ದೇಶಕರ ಹುದ್ದೆಗಳ ಅಂತಿಮ ಆಯ್ಕೆಪಟ್ಟಿಯನ್ನು ದಿನಾಂಕ: 26–9–2016 ರಂದು ಆಯೋಗದ ಅಂತರ್ಜಾಲ http:kpsc.kar.nic.in/Selection List/Final Selection List ರಲ್ಲಿ ಪ್ರಕಟಿಸಲಾಗಿದೆ.

## **Tourism Department *funds 8 Startups to enhance and enrich Tourism in the State***

Bengaluru, September 27, 2016:

On the occasion of the World Tourism Day on the 27th of September 2016, the Karnataka Startup Cell, KBITS, Department of IT and BT in association with the Department of Tourism, conducted an open challenge to crowd-source innovative solutions and products from Startups working in the area of Tourism.

The event was to Pitch to Government by Tech based Startups about their innovative ideas/ products in Tourism sector which can add value and compliment to Tourism in Karnataka to enhance and enrich the tourism experience for all tourists who visit Karnataka under Idea2PoC Scheme, Karnataka Startup Policy 2015 - 2020.

A total of 127 online registrations were received from various Startups by the end of 22nd September,2016,which was the last date to register.

A total of 49 Startups were selected to the first round and they pitched to jury panels consisting of representatives from Tourism and IT Department as well as members from the Industry associations of NASSCOM and IAMAI. Each Startup was evaluated on parameters like, Eligibility, Product & USP, Readiness to Roll Out, Benefit to Tourism and Business Plan. After the first round, 12 Startups were selected for the second and final round of Pitching. A total of 8 Startups were selected such as

AAO Hostels - Rs.40 Lakhs, Highway Delite - Rs.35 Lakhs, Highir Technologies - Rs.25 Lakhs, DigiTour Technologies - Rs. 25 Lakhs, Aseuro Technologies - Rs. 25 Lakhs, Trip Dairy - Rs. 20 Lakhs, Moving Up Products - Rs. 5 Lakhs, Trip On Food - Rs. 5 Lakhs.

Priyank Kharge, Minister for IT & BT and Tourism, said, "This is a first of its kind initiative in the country and a It is a great opportunity for Startups in tourism sector to showcase their technology solutions and pitch to the government and a panel of industry experts directly on the occasion of World Tourism Day. I hope we can adopt a few ideas to boost tourism or tourist experiences in the State and Bengaluru.

The Karnataka Startup cell at KBITS, Department of IT and BT is organizing this Hackathon in association with NASSCOM and IAMAI.

The Secretary, Tourism who was also present on the occasion stated that, the department would work in close association with the selected Startups to fine tune and roll out the applications.

The Principal Secretary to Government of Karnataka, Department of IT & BT, mentioned that a number of Government departments have come forward to contribute to the Idea2PoC Fund created by the IT&BT Department under the Multi-Sector Startup Policy of Karnataka. The objective is to nurture at least 100 ideas per annum under that initiative.